ವಿಜಯವಾಣಿ
ಕನ್ನಡಿಗರ ಧ್ವನಿ

# ಕ್ರಿಕೆಟಿಗ ರಾಹುಲ್‌ಗೆ ಜೈನ್ ವಿವಿ ಪ್ರಶಸ್ತಿ

## ಕ್ರೀಡಾ ಸಾಧಕರಿಗೆ ನಗದು ಬಹುಮಾನ




ಟೀಮ್ ಇಂಡಿಯಾ ಕ್ರಿಕೆಟಿಗ ಕೆ.ಎಲ್. ರಾಹುಲ್ ಅವರಿಗೆ ಜೈನ್ ವಿವಿ ಅಧ್ಯಕ್ಷ ಚೆನ್ನರಾಜ್ ಜೈನ್ 1.5 ಲಕ್ಷ ರೂ. ನಗದು ಬಹುಮಾನ ನೀಡಿ ಗೌರವಿಸಿದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯ ಕ್ರೀಡಾಕ್ಷೇತ್ರದಲ್ಲಿ ಪ್ರಖ್ಯಾತಿ ಹೆಸರು ಸಂಪಾದಿಸಿರುವ ಜೈನ್ ವಿಶ್ವವಿದ್ಯಾಲಯದ 2015-16ನೇ ಸಾಲಿನ ಕ್ರೀಡಾ ಪ್ರಶಸ್ತಿ ಪ್ರದಾನ ಸಮಾರಂಭ ಶನಿವಾರ ನಡೆಯಿತು. ಈ ಅವಧಿಯಲ್ಲಿ ದೇಶದ ವಿವಿಧೆಡೆ ನಡೆದ ಕ್ರೀಡಾಕೂಟಗಳಲ್ಲಿ ಗೆಲುವು ಸಾಧಿಸಿದ ಸಂಸ್ಥೆಯ ನಾಲ್ಕು ತಂಡಗಳು ಹಾಗೂ 8 ಕ್ರೀಡಾಪಟುಗಳಿಗೆ ಪ್ರಶಸ್ತಿ ಹಾಗೂ ನಗದು ಬಹುಮಾನ ವಿತರಿಸಲಾಯಿತು.

ವಿಶ್ವೇಶ್ವರಪುರದ ಕ್ಯಾಂಪಸ್‌ನಲ್ಲಿ ನಡೆದ ಸಮಾರಂಭದಲ್ಲಿ ಕಳೆದೊಂದು ವರ್ಷದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮಹತ್ತರ ಸಾಧನೆ ಮಾಡಿರುವ ಹಳೆಯ ವಿದ್ಯಾರ್ಥಿ ಕೆಎಲ್ ರಾಹುಲ್‌ಗೆ ಜೈನ್ ವಿವಿಯ ಅಧ್ಯಕ್ಷ ಚೆನ್ನರಾಜ್ ಜೈನ್ 1.5 ಲಕ್ಷ ರೂ. ಬಹುಮಾನ ನೀಡಿ ಗೌರವಿಸಿದರು. ಕ್ರೀಡಾ ನಿರ್ದೇಶಕ ಶಂಕರ್ ಹೊನ್ನ ಈ ವೇಳೆ ಉಪಸ್ಥಿತರಿದ್ದರು.

**ವಿಶ್ವೇಶ್ವರಪುರದ ಕಾಲೇಜು ಕ್ಯಾಂಪಸ್‌ನಲ್ಲಿ ಕಾರ್ಯಕ್ರಮ**

ರಿಯೋ ಒಲಿಂಪಿಕ್ಸ್‌ನ ಮಹಿಳಾ ಗಾಲ್ಫ್‌ನಲ್ಲಿ ಸ್ಪರ್ಧಿಸಿದ್ದ ಅದಿತಿ ಅಶೋಕ್ 1 ಲಕ್ಷ ರೂ. ಬಹುಮಾನ ಪಡೆದುಕೊಂಡರು. ಅದಿತಿ ಜೈನ್ ವಿವಿ ಪ್ರಥಮ ಪಿಯು ವಿದ್ಯಾರ್ಥಿನಿ. 2015ರ ಅಕ್ಟೋಬರ್‌ನಲ್ಲಿ ಚಂಡೀಗಢದ ಪಂಜಾಬ್ ವಿವಿಯಲ್ಲಿ ನಡೆದ ಈಜು ಚಾಂಪಿಯನ್‌ಶಿಪ್‌ನಲ್ಲಿ ಮಹಿಳಾ ವಿಭಾಗದ ಸಮಗ್ರ ಚಾಂಪಿಯನ್ ಎನಿಸಿಕೊಂಡಿದ್ದ ವಿ.ಆರ್. ಮೀನಾಕ್ಷಿಗೆ 1 ಲಕ್ಷ ರೂ. ಬಹುಮಾನ ನೀಡಲಾಯಿತು. ಕ್ರಿಕೆಟ್‌ನಲ್ಲಿ ದಕ್ಷಿಣ ವಲಯ ಚಾಂಪಿಯನ್ ಹಾಗೂ ಅಖಿಲ ಭಾರತ ಟೂರ್ನಿಯಲ್ಲಿ 3ನೇ ಸ್ಥಾನ ಪಡೆದ ಪುರುಷರ ತಂಡ 48 ಸಾವಿರ ರೂ. ಬಹುಮಾನ ಪಡೆಯಿತು. ಆಲ್ ಇಂಡಿಯಾ ಅಂತರ ವಿವಿ ಬ್ಯಾಡ್ಮಿಂಟನ್‌ನಲ್ಲಿ ಚಾಂಪಿಯನ್ ಆದ ಮಹಿಳಾ ತಂಡಕ್ಕೆ 45 ಸಾವಿರ ರೂ., ದಕ್ಷಿಣ ವಲಯ ಬಾಸ್ಕೆಟ್‌ಬಾಲ್‌ನಲ್ಲಿ ರನ್ನರ್‌ಅಪ್ ಆದ ಮಹಿಳಾ ತಂಡಕ್ಕೆ 24 ಸಾವಿರ ರೂ., ಕ್ರಿಕೆಟ್‌ನಲ್ಲಿ 4ನೇ ಸ್ಥಾನ ಪಡೆದ ಮಹಿಳಾ ತಂಡಕ್ಕೆ 11 ಸಾವಿರ ರೂ. ನೀಡಿ ಗೌರವಿಸಲಾಯಿತು.

**ವಿಜೇತರು:** ಅದಿತಿ ಅಶೋಕ್, ಗಾಲ್ಫ್ (1 ಲಕ್ಷ ರೂ.), ವಿ.ಆರ್. ಮೀನಾಕ್ಷಿ, ಈಜು (1 ಲಕ್ಷ ರೂ.), ಶ್ರುತಿ ಮಹಾಲಿಂಗಂ, ಈಜು (30 ಸಾವಿರ ರೂ.), ಪ್ರೋವರ್ ಕಿರಣ್ ಶೆಟ್ಟಿ, ಈಜು (18 ಸಾವಿರ ರೂ.), ದಿವ್ಯಾ ರಮೇಶ್, ಈಜು (16 ಸಾವಿರ ರೂ.), ರಕ್ಷಿತ್ ಶೆಟ್ಟಿ, ಈಜು (25 ಸಾವಿರ ರೂ.), ಕಿರಣ್ ಎಂ. ಅಪ್ಪಿನ್ಸ್ (25 ಸಾವಿರ ರೂ.), ದ. ವಲಯ ಚಾಂಪಿಯನ್ ಪುರುಷರ ಕ್ರಿಕೆಟ್ ತಂಡ (48 ಸಾವಿರ ರೂ.), ಅ.ಭಾ.ಚಾಂಪಿಯನ್ ಮಹಿಳಾ ಬ್ಯಾಡ್ಮಿಂಟನ್ ತಂಡ (45 ಸಾವಿರ ರೂ.), ದ. ವಲಯ ರನ್ನರ್‌ಅಪ್ ಬಾಸ್ಕೆಟ್‌ಬಾಲ್ ಮಹಿಳಾ ತಂಡ (24 ಸಾವಿರ ರೂ.), ದ. ವಲಯ ಕ್ರಿಕೆಟ್‌ನಲ್ಲಿ 4ನೇ ಸ್ಥಾನ ಪಡೆದ ಮಹಿಳಾ ತಂಡ (11 ಸಾವಿರ ರೂ.).